Superintendent, K.P.L.

Q.—4. Sri S. KARIAPPA (Virupakshapura).—

Will the Government be pleased to state:—

(*a*) whether the office of the Superintendent, K.P.L., will be shifted to Channapatna;

(*b*) if the answer is in the affirmative, whether they are going to remove the Transformer Station as well?

A—Sri H. M. CHANNABASAPPA (Minister for Industries).—

(*a*) A proposal has been made to that effect.

(*b*) No.

ಶ್ರೀ ಎಸ್. ಕರಿಯಪ್ಪ.—(a) ಪ್ರಶ್ನೆಗೆ ಉತ್ತರವಾಗಿ ಆ ರೀತಿಯಾಗಿ ಒಂದು ಸಲಹೆಯನ್ನು ಮಾಡಲಾಗಿದೆ ಎಂದು ಹೇಳಿದ್ದೀರಲ್ಲಾ ಅದರ ಜೊತೆಗೆ ಸಿಬ್ಬಂದಿಯನ್ನು ಕೂಡ ವರ್ಗಾಯಿಸಬೇಕೆಂದು ಮಾಡಿದ್ದೀರಾ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು, ಆಫೀಸು ಹೋದ ಮೇಲೆ ಸಿಬ್ಬಂದಿಯೂ ಹೋಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಸಿಬ್ಬಂದಿ ಸುಮಾರು ಎಷ್ಟು ಮಂದಿ ಇದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ—ಆ ವಿವರ ಇಲ್ಲಿ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಅವರುಗಳಿಗೆಲ್ಲಾ ಅಲ್ಲಿ ವಾಸಕ್ಕೆ ಮನೆ ಮುಂತಾದ ವ್ಯವಸ್ಥೆಗಳನ್ನು ಮಾಡುವುದಕ್ಕೆ ಏನಾದರೂ ಒಂದು ಎಸ್ಟಿಮೇಟ್ ಹಾಕಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚನ್ನಪಟ್ಟಣಕ್ಕೆ ವರ್ಗಾವಣೆ ಮಾಡುವುದಾದರೆ ಅಲ್ಲಿ ತಕ್ಕ ವ್ಯವಸ್ಥೆ ಮಾಡಿಯೇ ಮಾಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಸುಮಾರು ಅದಕ್ಕೆ ಎಷ್ಟು ಹಣ ಬೇಕಾಗಬಹುದು ಎಂದು ಅಂದಾಜು ಹಾಕಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿವರ ನನ್ನಲ್ಲಿ ಈಗ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಯಾವ ಪ್ರಬಲವಾದ ಕಾರಣಕ್ಕಾಗಿ ಇದನ್ನು ವರ್ಗ ಮಾಡುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚನ್ನಪಟ್ಟಣ ಕನಕಪುರಕ್ಕಿಂತ ಮಧ್ಯದಲ್ಲಿದೆ ಎಂದು ಈಗ ಆ ಪ್ರಪೋಸಲ್ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಎಷ್ಟೋ ವರ್ಷಗಳಿಂದ ಈ ಪವರ್ ಮತ್ತು ಲೈಟಿಂಗ್ ಸೂಪರ್‌ಇಂಡೆಂಟರ ಆಫೀಸು ಮತ್ತು ಟ್ರಾನ್ಸ್‌ಫಾರ್ಮರ್ ಸ್ಟೇಷನ್ನು ಇಲ್ಲೇ ಇದೆ ಅಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಬಂದಿರುವ ಪ್ರಪೋಸಲ್ ಸೂಪರ್‌ಇಂಡೆಂಟ್‌ರವರ ಆಫೀಸನ್ನು ಬದಲಾವಣೆ ಮಾಡಬೇಕೆಂದಿದೆಯೇ ವಿನಾ ಟ್ರಾನ್ಸ್‌ಫಾರ್ಮರ್ ಸ್ಟೇಷ ಬದಲಾವಣೆ ಮಾಡುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಸೂಪರ್‌ಇಂಡೆಂಟ್ ಅವರು ಮತ್ತು ಸಿಬ್ಬಂದಿಯವರನ್ನು ಇಲ್ಲಿಂದ ತೆಗೆದು ಅಲ್ಲಿಗೆ ವರ್ಗ ಮಾಡಬೇಕಾದರೆ ಸಾಧಾರಣವಾಗಿ 30 ವರ್ಷದಿಂದ ಇಲ್ಲದೆ ಇದ್ದ ತೊಂದರೆ ಈಗ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು ಮೂವತ್ತು ವರ್ಷದ ಹಿಂದಿನ ಪರಿಸ್ಥಿತಿ ಇವೊತ್ತು ಇಲ್ಲ. ಇವೊತ್ತಿನ ಪರಿಸ್ಥಿತಿಗೆ ತಕ್ಕಂತೆ ಇವೊತ್ತು ಮಾಡಬೇಕು.

Sales-tax and Licence fee income in Mysore City.

Q.—55. Sri B. NARAYANASWAMY (Mysore City South).—

Will the Government be pleased to state:—

(*a*) the income derived from levy of Sales-tax and Licence fee in the Mysore City for the years 1953 and 1954 (particulars may kindly be furnished as to how much was derived from levy on multi-point and on single-point separately);

(*b*) whether there are cases where tax was assessed on multi-point on commodities which come under single-point levy;

(*c*) whether there are any complaints that contractors are being levied, computing on the multi-point basis on articles issued by them for contract work such as iron, steel cement, etc.?

A.—Sri H. M. CHANNABASAPPA (Minister for Industries).—

(*a*)

	Licence fee	*Sales Tax realised from* *Multi-point*	*Single point*
	Rs.	Rs.	Rs.
1953-54 ...	25,686	7,82,335	3,83,241
1954-55 ...	13,906	6,08,004	4,42,517

(*b*) No.

(*c*) No.